# ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ
# ಜಿಲ್ಲಾ ಚುನಾವಣಾಧಿಕಾರಿಗಳ ಕಾರ್ಯಾಲಯ, ಕೋಲಾರ ಜಿಲ್ಲೆ, ಕೋಲಾರ.

E-mail ID: deo.kolar07@gmail.com (ಚುನಾವಣೆ ಶಾಖೆ) ದೂರವಾಣಿ ಸಂಖ್ಯೆ: 08152-243507


ನಂ.ಜಿಚುಕೋ/ಚುನಾವಣೆ/ಡಿಸಿಸಿಬ್ಯಾಂಕ್/ಸಿಆರ್/14/2023-24 ದಿನಾಂಕ: 13/05/2025

ವಿಷಯ : ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಯ ಚುನಾವಣೆಗೆ ಸಂಬಂಧಿಸಿದಂತೆ ಅಂತಿಮ ಮತದಾರರ ಪಟ್ಟಿಗಳ ಪ್ರಕಟಣೆ ಸಂಬಂಧ ತಿದ್ದುಪಡಿ ಆದೇಶ ಹೊರಡಿಸಿರುವ ಕುರಿತು.

ಉಲ್ಲೇಖ : ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಡಿ.ಸಿ.ಸಿ. ಬ್ಯಾಂಕ್, ಕೋಲಾರ ರವರ ಪತ್ರ ನಂ.ಕೆಸಿಡಿಸಿಸಿಬಿ/ಯೋ&ಅ/939/2025-26 ದಿ: 13/5/2025.

********

## ತಿದ್ದುಪಡಿ ಆದೇಶ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ ಕೋಲಾರ ಜಿಲ್ಲೆ ಇದರ ಆಡಳಿತ ಮಂಡಳಿಯ ಚುನಾವಣೆಗೆ ಸಂಬಂಧಿಸಿದಂತೆ ದಿನಾಂಕ : 12/05/2025 ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ದಿನಾಂಕ : 13/05/2025 ರಂದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಡಿ.ಸಿ.ಸಿ. ಬ್ಯಾಂಕ್, ಕೋಲಾರ ರವರು ಮನವಿಯನ್ನು ಸಲ್ಲಿಸುತ್ತಾ, ದಿನಾಂಕ : 12/05/2025 ರಂದು ಸಲ್ಲಿಸಲಾಗಿದ್ದ ಅಂತಿಮ ಮತದಾರರ ಪಟ್ಟಿಯಲ್ಲಿ ಕ್ರಸಂ. 1 ರ 1. ಮಂಚೇನಹಳ್ಳಿ (ಮಂಚೇನಹಳ್ಳಿ ತಾಲ್ಲೂಕಿನ ಮಂಚೇನಹಳ್ಳಿ ಹೋಬಳಿ & ಗೌರಿಬಿದನೂರು ತಾಲ್ಲೂಕಿನ ತೊಂಡೆಬಾವಿ ಹಾಗೂ ಡಿ.ಪಾಳ್ಯ ಹೋಬಳಿಗಳ) 'ಎ' ವರ್ಗದಲ್ಲಿ ಪ್ರಾ.ಕೃ.ಪ.ಸ.ಸಂಘಗಳು ಎಂಬುದಾಗಿ ನಮೂದಿಸಿ, ಗೌರಿಬಿದನೂರು ತಾಲ್ಲೂಕಿನ ತೊಂಡೆಬಾವಿ ಹಾಗೂ ಡಿ.ಪಾಳ್ಯ ಹೋಬಳಿಗಳ ಸಹಕಾರ ಸಂಘಗಳನ್ನು ಮಂಚೇನಹಳ್ಳಿ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ಕಣ್‌ತಪ್ಪಿನಿಂದ ಸೇರಿಸಿರುವುದಾಗಿ, ಮಂಚೇನಹಳ್ಳಿ ತಾಲ್ಲೂಕಿನ ಮತದಾರರ ಪಟ್ಟಿಯಿಂದ ಗೌರಿಬಿದನೂರು ತಾಲ್ಲೂಕಿಗೆ ಸಂಬಂಧಪಟ್ಟಿರುವ ಸಹಕಾರ ಸಂಘಗಳನ್ನು ಕೈಬಿಟ್ಟು ಗೌರಿಬಿದನೂರು ತಾಲ್ಲೂಕಿಗೆ ಸೇರ್ಪಡೆ ಮಾಡಿ ಅಂತಿಮ ಮತದಾರರ ಪಟ್ಟಿಗೆ ತಿದ್ದುಪಡಿಯನ್ನು ಮಾಡಿಕೊಡುವಂತೆ ಕೋರಿರುತ್ತಾರೆ.

ಅದರಂತೆ, ದಿನಾಂಕ : 12/05/2025 ರಂದು ಪ್ರಕಟಿಸಲಾಗಿರುವ ಅಂತಿಮ ಮತದಾರರ ಪಟ್ಟಿಯಲ್ಲಿನ ಕ್ರಸಂ. 1ರ "1. ಮಂಚೇನಹಳ್ಳಿ (ಮಂಚೇನಹಳ್ಳಿ ತಾಲ್ಲೂಕಿನ ಮಂಚೇನಹಳ್ಳಿ ಹೋಬಳಿ & ಗೌರಿಬಿದನೂರು ತಾಲ್ಲೂಕಿನ ತೊಂಡೆಬಾವಿ ಹಾಗೂ ಡಿ.ಪಾಳ್ಯ ಹೋಬಳಿಗಳ) 'ಎ' ವರ್ಗದಲ್ಲಿ ಪ್ರಾ.ಕೃ.ಪ.ಸ.ಸಂಘಗಳು" ಎಂಬುದಾಗಿ ನಮೂದಿಸಿರುವುದನ್ನು "1. ಮಂಚೇನಹಳ್ಳಿ ತಾಲ್ಲೂಕಿನ 'ಎ' ವರ್ಗದಲ್ಲಿ ಪ್ರಾ.ಕೃ.ಪ.ಸ.ಸಂಘಗಳು" ಎಂಬುದಾಗಿ ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು. ಹಾಗೂ ಮಂಚೇನಹಳ್ಳಿ ತಾಲ್ಲೂಕಿನ ಮತದಾರರ ಪಟ್ಟಿಯಲ್ಲಿ ಈ ಕೆಳಕಂಡಂತೆ ತಿದ್ದುಪಡಿಯನ್ನು ಕೈಗೊಳ್ಳಲಾಗಿದ್ದು, ಈ ಕೆಳಕಂಡಂತೆ ಓದಿಕೊಳ್ಳತಕ್ಕದ್ದು.

| ಕ್ರಸಂ. | ಮತದಾರರ ಪಟ್ಟಿಯಲ್ಲಿನ | ಸಹಕಾರ ಸಂಘಗಳು | ತಿದ್ದುಪಡಿ | |
|---|---|---|---|---|
| 1 | ಅನುಬಂಧ-1 | ಕ್ರಸಂ.5, 6 ಮತ್ತು 10 ರಲ್ಲಿನ ಸಹಕಾರ ಸಂಘಗಳು | ಮಂಚೇನಹಳ್ಳಿ ತಾಲ್ಲೂಕಿನ 'ಎ' ವರ್ಗದಲ್ಲಿ ಉಳಿಸಿಕೊಂಡಿದೆ. | - |
| 2 | | ಕ್ರಸಂ.1, 2, 3, 4, 7, 8, 9 ಮತ್ತು 11 ರಲ್ಲಿನ ಸಹಕಾರ ಸಂಘಗಳು | ಮಂಚೇನಹಳ್ಳಿ ತಾಲ್ಲೂಕಿನ 'ಎ' ವರ್ಗದಲ್ಲಿ ಕೈಬಿಡಲಾಗಿದೆ. | ಗೌರಿಬಿದನೂರು ತಾಲ್ಲೂಕಿನ 'ಎ' ವರ್ಗದಲ್ಲಿನ ಪ್ರಾ.ಕೃ.ಪ.ಸಂ.ಸಂಘಗಳ ಕ್ರಸಂ.18 ರ ನಂತರ ಸೇರ್ಪಡೆಗೊಳಿಸಿದೆ. |
| 3 | ಅನುಬಂಧ-4 | ಕ್ರಸಂ.4, 5 ಮತ್ತು 11 ರಲ್ಲಿನ ಸಹಕಾರ ಸಂಘಗಳು | ಮಂಚೇನಹಳ್ಳಿ ತಾಲ್ಲೂಕಿನ 'ಎ' ವರ್ಗದಲ್ಲಿ ಉಳಿಸಿಕೊಂಡಿದೆ. | - |
| 4 | | ಕ್ರಸಂ.1, 2, 3, 6, 7, 8, 9 ಮತ್ತು 10 ರಲ್ಲಿನ ಸಹಕಾರ ಸಂಘಗಳು | ಮಂಚೇನಹಳ್ಳಿ ತಾಲ್ಲೂಕಿನ 'ಎ' ವರ್ಗದಲ್ಲಿ ಕೈಬಿಡಲಾಗಿದೆ. | ಗೌರಿಬಿದನೂರು ತಾಲ್ಲೂಕಿನ 'ಎ' ವರ್ಗದಲ್ಲಿನ ಪ್ರಾ.ಕೃ.ಪ.ಸಂ.ಸಂಘಗಳ ಕ್ರಸಂ.10 ರ ನಂತರ ಸೇರ್ಪಡೆಗೊಳಿಸಿದೆ. |

ಜಿಲ್ಲಾಧಿಕಾರಿ ಹಾಗೂ
ಜಿಲ್ಲಾ ಚುನವಣಾಧಿಕಾರಿ,
ಕೋಲಾರ ಜಿಲ್ಲೆ, ಕೋಲಾರ.